International Journal of Kannada Research
www.kannadajournal.com

**ISSN: 2454–5813**
IJKR 2019; 5(4): 155-159
© 2019 IJKR
www.kannadajournal.com
Received: 22-08-2019
Accepted: 24-09-2019

**ಯಮನಪ್ಪ**
ಸಂಶೋಧನಾ ವಿದ್ಯಾರ್ಥಿ
ಗ್ರಾಮೀಣಾಭಿವೃದ್ಧಿ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು–560056

**Corresponding Author:**
**ಯಮನಪ್ಪ**
ಸಂಶೋಧನಾ ವಿದ್ಯಾರ್ಥಿ
ಗ್ರಾಮೀಣಾಭಿವೃದ್ಧಿ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು–560056

# ಸಾಮಾಜಿಕ ಲೆಕ್ಕ ಪರಿಶೋಧನೆ ಒಳಗೊಂಡಂತೆ ಪಂಚಾಯತ್‌ರಾಜ್ ಸಂಸ್ಥೆಗಳು ಸಾಮಾಜಿಕ ನ್ಯಾಯದ ಸಂಸ್ಥೆಗಳು – ಡಾ.ಬಿ.ಆರ್. ಅಂಬೇಡ್ಕರ್‌ರವರ ಚಿಂತನೆಗಳು

**ಯಮನಪ್ಪ**

ಪಂಚಾಯತ್‌ರಾಜ್ ವ್ಯವಸ್ಥೆಯು, ಆಡಳಿತ ಸಂಸ್ಥೆಗಿಂತ ಮುಖ್ಯವಾಗಿ ಸಾಮಾಜಿಕ ನ್ಯಾಯ ಒದಗಿಸುವ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಸಂಸ್ಥೆಗಳಾಗಬೇಕೆಂಬ ಚಿಂತನೆ ಅಂಬೇಡ್ಕರ್‌ರವರದ್ದು. ಸಾಮಾಜಿಕ ನ್ಯಾಯವಿಲ್ಲದೆ ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ಒದಗಿಸಲು ಸಾಧ್ಯವಿಲ್ಲ ಎಂಬ ಸಾರಾಂಶ ಈ ಲೇಖನದ ತಿರುಳು. ಸ್ಥಳೀಯ ವಿಕೇಂದ್ರೀಕರಣ ಸಂಸ್ಥೆಗಳಲ್ಲಿ ಅವಕಾಶವಂಚಿತರಿಗೆ ಸಾಮಾಜಿಕ ನ್ಯಾಯವನ್ನು ಕೊಡುವುದು ಅತಿ ಪ್ರಮುಖವಾದ ಅಭಿವೃದ್ಧಿ ವಿಷಯವಾಗಬೇಕೆಂಬ ಈ ಲೇಖನದ ಸಾರಾಂಶ. ಪಂಚಾಯತ್‌ರಾಜ್ ಸಂಸ್ಥೆಗಳು ಅಂಬೇಡ್ಕರವರ ಚಿಂತನೆಯ ಫಲವಾಗಿ, ಈ ಚಿಂತನೆಗಳಿಗೆ 73ನೇ ಸಂವಿಧಾನದ ತಿದ್ದುಪಡಿಯ ಮೂಲಕ ಸಂವಿಧಾನಿಕ ಮಾನ್ಯತೆ ನೀಡಿ ಭೌತಿಕ ಅಭಿವೃದ್ಧಿಯ ಜೊತೆಗೆ ಸಾಮಾಜಿಕ ನ್ಯಾಯ ಕೊಡಲು ಕೇಂದ್ರ ಸರಕಾರ ಪ್ರಯತ್ನಿಸಿದೆ.
ಈ ಲೇಖನದ ಉದ್ದೇಶಗಳು :–

1. ಪಂಚಾಯತ್ ಆಡಳಿತದಲ್ಲಿ ಅಂಬೇಡ್ಕರವರ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ತಿಳಿಯುವುದು.
2. ಸಾಮಾಜಿಕ ನ್ಯಾಯದ ಹಿನ್ನಲೆಯಲ್ಲಿ ಅಂಬೇಡ್ಕರವರು ಪಂಚಾಯತ್‌ರಾಜ್ ವ್ಯವಸ್ಥೆಯನ್ನು ತಿರಸ್ಕರಿಸುವ ಹಿನ್ನಲೆ ತಿಳಿಯುವುದು.
3. ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಸಾಮಾಜಿಕ ಪರಿಶೋಧನೆಯನ್ನು ಪರಿಚಯಿಸುವುದು.

**Keywords:** *73ನೇ ಸಂವಿಧಾನ ತಿದ್ದುಪಡಿ, ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ಸಂಸ್ಥೆಗಳು, ಅಂಬೇಡ್ಕರ್‌ರವರ ಸಾಮಾಜಿಕ ಚಿಂತನೆಗಳು.*

### ಪೀಠಿಕೆ

ಪಂಚಾಯತ್‌ರಾಜ್ ಸಂಸ್ಥೆಗಳು ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಗ್ರಾಮೀಣ ಆಡಳಿತ ಸಂಸ್ಥೆಗಳು. ಸ್ಥಳೀಯ ಮಟ್ಟದ ಜನರ ಅವಶ್ಯಕತೆಗಳನ್ನು ಜನರೇ ಈಡೇರಿಸಿಕೊಳ್ಳುವ ಮತ್ತು ಜನರ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಸಂವಿಧಾನಬದ್ಧವಾಗಿ ಸ್ಥಾಪಿತವಾದ ಸಂಸ್ಥೆಗಳಾಗಿವೆ. ಕೇಂದ್ರದ ಮಟ್ಟದಲ್ಲಿ ಕುಳಿತು, ಸ್ಥಳೀಯ ಜನತೆಯ ಬೇಕು–ಬೇಡಗಳ ನಿರ್ಧಾರ ತೆಗೆದುಕೊಳ್ಳುವ ಬದಲು, ಸ್ಥಳೀಯರೇ ತಮ್ಮ ಬೇಕುಬೇಡಗಳನ್ನು ನಿರ್ಧರಿಸುವುದಕ್ಕೆ ಈ ಸಂಸ್ಥೆಗಳು ಜನರ ಭಾಗವಾಹಿಸುವಿಕೆಗೆ ಒಂದು ವೇದಿಕೆಯನ್ನು ಕಲ್ಪಿಸಿವೆ.

ಈ ಸಂಸ್ಥೆಗಳು ಪ್ರಾರಂಭದಲ್ಲಿ ಕೇವಲ ಅಭಿವೃದ್ಧಿ ಆಡಳಿತ ಸಂಸ್ಥೆಗಳಾಗಿದ್ದವು. ಆದರೆ ಅಂಬೇಡ್ಕರ್‌ರವರು ಈ ಸಂಸ್ಥೆಗಳ ಉದ್ದೇಶಿತದಲ್ಲಿ ಸಾಮಾಜಿಕ ಸಮಾನತೆ ಸಾಧಿಸಲು ಅವಕಾಶವಿಲ್ಲದ್ದನ್ನು ಟೀಕಿಸಿದರ ಪರಿಣಾಮವಾಗಿ ಸಾಂವಿಧಾನದ ರಚನಾಕಾರರು, ನೀತಿ–ನಿರೂಪಕರು ಪಂಚಾಯತ್‌ರಾಜ್ ಸಂಸ್ಥೆಗಳನ್ನು ಅಭಿವೃದ್ಧಿ ಸಂಸ್ಥೆಗಳ ಜೊತೆ–ಜೊತೆಗೆ ಸಾಮಾಜಿಕ ನ್ಯಾಯವನ್ನು ಕೊಡುವ ಗ್ರಾಮೀಣ ಸ್ಥಳೀಯ ಸಂಸ್ಥೆಗಳನ್ನಾಗಿ ರೂಪಿಸಿದರು.

ಒಂದು ಸಮಾಜದಲ್ಲಿ ಕ್ರಮವಾಗಿ ಸ್ವಾತಂತ್ರ್ಯ, ಸಮಾನತೆಸಹೋದರತೆಗಳು ಎಂಬ ಸಮಾಜವಾದದ ಆದರ್ಶಗಳನ್ನು ಸಮಾಜವಾದಿಗಳು ಬೆಂಬಲಿಸಿದರೆ, ಅಂಬೇಡ್ಕರ್‌ರವರು ಇದೇ ಆದರ್ಶಗಳ ಕ್ರಮಾನುಗತವನ್ನು ಬದಲಾಯಿಸಿ, ಮೊದಲು ಸಹೋದರತೆ ಸ್ವಾತಂತ್ರ್ಯ ನಂತರ ಸಮಾನತೆ ಬಗ್ಗೆ ಒಲವು ವ್ಯಕ್ತಪಡಿಸಿದರು. ಅಂಬೇಡ್ಕರ್‌ರವರು ಯಾಕೆ ಸಮಾಜವಾದ ಆದರ್ಶಗಳ ಕ್ರಮಾನುಗತದಲ್ಲಿ ಬದಲಾಯಿಸಿ ಸಹೋದರತೆಗೆ ಒತ್ತುಕೊಟ್ಟಿದ್ದು, ಆಗಿನ ಭಾರತದ ಸಮಾಜದಲ್ಲಿ ಜಾತಿಯು ಗಾಢವಾಗಿ ಬೇರೂರಿತ್ತು. ಇದನ್ನು ನಿವಾರಿಸಲು ಮೊದಲು ಮಾನವೀಯ ಸಮಾಜ ನಿರ್ಮಿಸಲು ಪ್ರಯತ್ನಿಸಿ, ಜಾತಿ ಜಾತಿಗಳ ಮಧ್ಯೆ, ಧರ್ಮ ಧರ್ಮಗಳ ಮಧ್ಯೆ, ಮತ್ತು ಲಿಂಗಗಳ ಮಧ್ಯೆ ತಾರತಮ್ಯವನ್ನು ನಿವಾರಿಸಿ ಸಹೋದರತೆಯ ಭಾರತ ಸಮಾಜಕ್ಕೆ ಒತ್ತು ನೀಡಿದವರು ಬಿ.ಆರ್.ಅಂಬೇಡ್ಕರ್‌ರವರು.

ಅಂದರೆ ಅಭಿವೃದ್ಧಿ ಸಂಸ್ಥೆಗಳಾದ ಪಂಚಾಯತ್‌ರಾಜ್ ವ್ಯವಸ್ಥೆಗಳು ಸಾಮಾಜಿಕ ನ್ಯಾಯವನ್ನು ಕೊಡುವ ಸಂಸ್ಥೆಗಳಾಗುವಂತೆ ಪ್ರೇರೇಪಿಸಿ, ಸಮಾಜದ ನಿರ್ಗತಿಕರ ಅವಕಾಶವಂಚಿತರಿಗೆ ಸಂವಿಧಾನದ ಮೂಲಕ ಪಂಚಾಯ್ತಿ ಸಂಸ್ಥೆಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಅಂಬೇಡ್ಕರ್‌ರವರ ಮಾನವೀಯ ಸಮಾಜದ ವೈಚಾರಿಕತೆಯ ಹಿನ್ನೆಲೆಯಲ್ಲಿ ಸಾಂವಿಧಾನವು 15 ನೇ ವಿಧಿ ಪ್ರಕಾರ ಜಾತಿ, ಲಿಂಗ ಧರ್ಮದ ಆಧಾರದ ಮೇಲೆ ತಾರತಮ್ಯ ಮಾಡುವಂತಿಲ್ಲ, ಜೊತೆಗೆ ಅಸ್ಪೃಶ್ಯತೆ ನಿವಾರಿಸಲು 17ನೇ ವಿಧಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. 46 ವಿಧಿ ನಿರ್ಗತಿಕರನ್ನು ಶೋಷಣೆಯಿಂದ ರಕ್ಷಿಸಲು ಕ್ರಮಕೈಗೊಳ್ಳಲಾಯಿತು.ಈ ರೀತಿಯ ಕ್ರಮಗಳು ನೈಜವಾಗಿ ಪಂಚಾಯತ್ ಸಂಸ್ಥೆಗಳ ಆಡಳಿತ ಕ್ರಮದಲ್ಲಿ ಜಾರಿಗೆ ಬರುವಂತೆ ಅಂಬೇಡ್ಕರ್‌ರವರು ಒತ್ತಾಯಿಸಿದ ಪ್ರಯುಕ್ತವಾಗಿ, ಸಂವಿಧಾನದ 73ನೇ ತಿದ್ದುಪಡೆಯಲ್ಲಿ ಕೆಲವು ಸಂವಿಧಾನಬದ್ಧ ಕ್ರಮಗಳ ಮೂಲಕ ಸಾಮಾಜಿಕ ನ್ಯಾಯವನ್ನು ಕಲ್ಪಿಸಲು ಸಾಧ್ಯವಾಯಿತು.

**ಸಾಮಾಜಿಕ ನ್ಯಾಯವನ್ನು ಒಳಗೊಂಡ ಪಂಚಾಯ್ತಿ ಜಾರಿಯ ಹಿನ್ನೆಲೆ**

ಸಂವಿಧಾನ ರಚನಾ ಸಭೆಯಲ್ಲಿ 1948 ರಂದು ಡಾ.ಬಿ.ಆರ್. ಅಂಬೇಡ್ಕರ್‌ರವರು ಸಂವಿಧಾನಕ್ಕೆ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಅಳವಡಿಸಲು ಯತ್ನಿಸಿ–ನಡೆದ ಚರ್ಚೆಯಲ್ಲಿ ವಿರೋಧ ವ್ಯಕ್ತಪಡಿಸಿದರು, ಕಾರಣ ಯಾವುದೇ ಕೇಂದ್ರ ಸರಕಾರ, ವಿಕೇಂದ್ರಿಕರಣ ಸರಕಾರಗಳು ಬಂದರೂ ಸಹ ಸಮಾಜದ ಅಸಮಾನತೆ ತೊಲಗಿಸಲು ಸಾಧ್ಯವಿಲ್ಲ. ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ಸಮತಾ ಸಮಾಜ, ಸಹೋದರತ್ವದ ಸಮಾಜವನ್ನು ನಿರ್ಮಿಸಲು ಸಾಧ್ಯವಿಲ್ಲ. ಆದ್ದರಿಂದ ಇಂತಹ ಪಂಚಾಯತ್‌ರಾಜ್ ವ್ಯವಸ್ಥೆಗಳ ಬದಲಾಗಿ, ನಿರ್ಗತಿಕರಿಗೆ, ಅವಕಾಶವಂಚಿತರಿಗೆ, ಮತ್ತು ಮಹಿಳೆಯರಿಗೆ, ರೈತರಿಗೆ ಮುಂತಾದವರಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡುವಲ್ಲಿ ಪ್ರಯತ್ನಗಳಾಗಬೇಕು ಎಂದು ವಾದಿಸಿದರು.

ಆದರೆ ಉಳಿದ ಸದಸ್ಯರು ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಪಂಚಾಯತ್‌ರಾಜ್ ಸಂಸ್ಥೆಗಳ ಅಳವಡಿಕೆಗೆ ಒಲವು ತೋರಿಸಿ, ಅಂಬೇಡ್ಕರ್‌ರವರ ವಿಚಾರ–ದಾರೆಗಳನ್ನು ಟೀಕಿಸಿದ್ದಲ್ಲದೇ ಅಂಬೇಡ್ಕರ್‌ರವರ ಸಾಮಾಜಿಕ ನ್ಯಾಯದ ಕಲ್ಪನೆಗೆ ನ್ಯಾಯ ದೊರಕಿಸಿಕೊಡುವ ಹಿನ್ನೆಲೆಯಲ್ಲಿ 31ಎ ವಿಧಿಯಡಿಯಲ್ಲಿ ಸೇರ್ಪಡೆಯಾಗಬೇಕಾಗಿದ್ದ ಪಂಚಾಯತ್ ವಿಷಯವು 40ನೇ ವಿಧಿಯಲ್ಲಿ ಸೇರಿಸಿ, ಸಂವಿಧಾನದ ಭಾಗ 4, ರಾಜ್ಯನೀತಿ ನಿರ್ದೇಶಕ ತತ್ವಗಳ ಅಡಿಯಲ್ಲಿ ಪಂಚಾಯತ್ ವಿಷಯಗಳನ್ನು ಸೇರಿಸಿ ರಾಜ್ಯ ಸರ್ಕಾರಗಳು ವಿಕೇಂದ್ರೀಕರಣ ಸಂಸ್ಥೆಗಳ ಜಾರಿಯ ಹೊಣೆಯನ್ನು ಹೊರಬೇಕಾಯಿತು.

ರಾಜ್ಯನೀತಿ ನಿರ್ದೇಶಕ ತತ್ವಗಳ ಅಡಿಯಲ್ಲಿ ಸೇರಿಸಲು ಕಾರಣ, ಈ ತತ್ವಗಳ ಮುಖ್ಯ ಉದ್ದೇಶ ಸಾಮಾಜಿಕ ಸ್ವಾತಂತ್ರ್ಯವನ್ನು ಕಲ್ಪಿಸುವುದು, ಇದನ್ನು ಸಾಧಿಸಲು ಪಂಚಾಯತ್‌ರಾಜ್ ಸಂಸ್ಥೆಗಳ ಸ್ಥಾಪನೆಯ ಹೊಣೆಗಾರಿಕೆ ನೀಡಲಾಗಿದೆ. ಪಂಚಾಯ್ತಿಗಳಿಂದ ಭೌತಿಕ ಬದಲಾವಣೆ ಬದಲಾಗಿ, ಜಾತಿ ವ್ಯವಸ್ಥೆ ಎಂಬ ಮಾನವನ ಮಾನಸಿಕತೆಯ ಸಾಮಾಜಿಕ ಮನಸ್ಥಿತಿಯನ್ನು ಬದಲಾಯಿಸುವುದು ಅತಿ ಮುಖ್ಯವಾದದ್ದು, ಆದ್ದರಿಂದ ಒಂದು ಅಭಿವೃದ್ಧಿ ಸಂಸ್ಥೆಯ ಬದಲಾಗಿ, ಸಾಮಾಜಿಕ ಅನ್ಯಾಯವನ್ನು ಸರಿಪಡಿಸುವ ಸಂಸ್ಥೆಗಳಿಗೆ ಮೊದಲು ಆಧ್ಯತೆ ಕೊಡಬೇಕೆಂದು ಅಂಬೇಡ್ಕರ್‌ರವರು ವಾದಿಸಿದರು. ಸಹೋದರಬಾವಗಳೆಂಬ ಸಮಾನತೆ, ಸ್ವಾತಂತ್ರ್ಯ ಮತ್ತು ಸಮಾಜವಾದದ ತತ್ವಗಳು ಜಾರಿಯಾಗಬೇಕಾದರೆ ಅಭಿವೃದ್ಧಿ ಸಂಸ್ಥೆಗಳ (ಙಚ) ಬದಲಾಗಿ ಸಾಮಾಜಿಕ ಸ್ವಾತಂತ್ರ್ಯಕ್ಕೆ ಒತ್ತು ನೀಡಬೇಕೆಂದು ಅಂಬೇಡ್ಕರ್ ಹೇಳಿದರು.

**ಅಂಬೇಡ್ಕರ್‌ರವರ ಚಿಂತನೆಗಳಿಗೆ ಮಾನ್ಯತೆ ನೀಡಿದ ವಿವಿಧ ಸಮಿತಿಗಳು**

ಸಂವಿಧಾನ ರಚನಾ ಸಭೆಯಲ್ಲಿ ಅಂಬೇಡ್ಕರ್‌ರವರು ಪಂಚಾಯ್ತಿಗಳನ್ನು ಸಂವಿಧಾನಕ್ಕೆ ಅಳವಡಿಕೆಗೆ ವಿರೋಧ ವ್ಯಕ್ತಪಡಿಸಿದರು. ಕಾರಣ ಸ್ಥಳೀಯ ಮಟ್ಟದ ನಿರ್ದಾರಗಳಲ್ಲಿ ಉಳ್ಳವರೇ ಪ್ರಾಬಲ್ಯ ಮೆರೆದು, ಅವಕಾಶವಂಚಿತರು ಇನ್ನು ಅವಕಾಶವಂಚಿತರಾಗಿ ನಿರ್ಗತಿಕರಾಗುತ್ತಾರೆ, ಎಸ್.ಸಿ./ಎಸ್.ಟಿ, ಮಹಿಳೆಯರು ಮತ್ತು ಅಂಗವಿಕಲರಿಗೆ ಸಾಮಾಜಿಕ ನ್ಯಾಯ ಸಿಗುವುದಿಲ್ಲ. ಭಾರತದ ಜಾತಿ ವ್ಯವಸ್ಥೆ ಗಟ್ಟಿಯಾಗಿ ಬೇರೂರಿದ್ದು ಗ್ರಾಮೀಣ ಪ್ರದೇಶದಲ್ಲಿ, ಇದರಿಂದ ಪ್ರಬಲ ವರ್ಗದವರು ಪಂಚಾಯ್ತಿ ಪ್ರದೇಶಗಳಲ್ಲಿ ನಿರ್ಣಾಯಕರಾಗುತ್ತಾರೆ. ಇದರಿಂದ ಅವಕಾಶ ವಂಚಿತರಿಗೆ ಅನ್ಯಾಯವಾಗುವುದು ಎಂದು ವಸ್ತುಸ್ಥಿತಿ ವಿವರಿಸಿದ ಅಂಬೇಡ್ಕರ್‌ರವರು ಪಂಚಾಯಿತಿ ಎಂಬ ವಿಕೇಂದ್ರೀಕರಣ ಆಡಳಿತವನ್ನು ವಿರೋಧಿಸಿದರು. ಮೇಲಿನ ಈ ಸಾಮಾಜಿಕ ಅಸಮಾನತೆ ತೊಲಗಿಸಲು ಕೆಲವು ಸಮಿತಿಗಳು ತಮ್ಮ ಶಿಫಾರಸ್ಸುಗಳ್ಳಲ್ಲಿ ಅಂಬೇಡ್ಕರ್‌ರವರ ಈ ಮೇಲಿನ ವಾದಕ್ಕೆ ಪುಷ್ಟಿಯನ್ನು ನೀಡಿದವು.

ಅಂಬೇಡ್ಕರವರು ಪಂಚಾಯತಿ ಸಂಸ್ಥೆಗಳನ್ನು ವಿರೋಧ ಮಾಡಿದ್ದರಿಂದ ಜವಹರಲಾಲ್ ನೆಹರೂರವರು ಪಂಚಾಯ್ತಿಗಳ ಜಾರಿಗೆಗೆ 10 ವರ್ಷಗಳ ಕಾಲ ತಡೆ ಹಿಡಿದಿದ್ದರು. ನಂತರ 1952 ಮತ್ತು 1953ರಲ್ಲಿ ಅಆಕ (Community Development Programme)& NEP (National Extention Programme) ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದರಿಂದಾಗಿ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಒತ್ತು ಕೊಡಲಾಯಿತು.

- CDP &NEP ಕಾರ್ಯಕ್ರಮಗಳ ಅಧ್ಯಯನಕ್ಕಾಗಿ 1957ರಲ್ಲಿ ಬಲವಂತರಾಯ್ ಮೆಹ್ತ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯ ಶಿಫಾರಸ್ಸಿನ ಮೇರೆಗೆ 1959 ಅಕ್ಟೋಬರ್ 2 ರಂದು ದೇಶದ ಪ್ರಥಮ ಪಂಚಾಯ್ತಿರಾಜ್ ವ್ಯವಸ್ಥೆಯನ್ನು ಅಧಿಕೃತವಾಗಿ ಜಾರಿಗೊಳಿಸಲಾಯಿತು.
- 1977ರಲ್ಲಿರಚಿಸಲಾದ ಅಶೋಕಮೆಹ್ತಾ ಸಮಿತಿಯು ಅಂಬೇಡ್ಕರ್‌ರವರ ಚಿಂತನೆಗಳಿಗೆ ಒತ್ತು ನೀಡಿ ಪಂಚಾಯ್ತಿರಾಜ್ ಸಂಸ್ಥೆಗಳಲ್ಲಿ ಎಸ್.ಸಿ/ಎಸ್.ಟಿ

ಸಮುದಾಯಗಳಿಗೆ ಮೀಸಲಾತಿಯನ್ನು ನೀಡುವಂತೆ ಸಲಹೆ ನೀಡಿತು. ಇದು ಅಂಬೇಡ್ಕರ್‌ರವರ ಚಿಂತನೆಗೆ ದಕ್ಕಿದ ಫಲವಾಗಿದ್ದು, ಗ್ರಾಮೀಣ ಅವಕಾಶವಂಚಿತರು ಅಭಿವೃದ್ಧಿ ಸಂಸ್ಥೆಗಳ ಕಾರ್ಯ–ನಿರ್ವಹಣೆಯಲ್ಲಿ ಭಾಗವಹಿಸುವಂತೆ ಮಾಡಿ ಒಳಗೊಳ್ಳುವ ಅಭಿವೃದ್ಧಿ ಪ್ರಕ್ರಿಯೆಗೆ ಚಾಲನೆ ನೀಡಿದಂತಾಯಿತು.

- ಜೊತೆಗೆ ಅಶೋಕಮೆಹ್ತಾ ಸಮಿತಿಯು ಪಂಚಾಯ್ತಿಗಳ ಯೋಜನೆಗಳ ಅನುಷ್ಠಾನದ ಮೌಲ್ಯಮಾಪನಕ್ಕೆ, ಮತ್ತು ನಿರ್ಗತಿಕರ ಕಲ್ಯಾಣಕ್ಕಾಗಿ ಜಾರಿಗೆತರಲಾದ ಪಂಚಾಯ್ತಿಗಳ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನಕ್ಕಾಗಿ 'ಸಾಮಾಜಿಕ ಪರಿಶೋಧನೆ'ಯನ್ನು ಪರಿಚಯಿಸಲು ಶಿಫಾರಸ್ಸು ಮಾಡಿತು.
- ಜೊತೆಗೆ ಅಶೋಕಮೆಹ್ತಾರವರು ಅಂಬೇಡ್ಕರ್ ಚಿಂತನೆಯ ಪಂಚಾಯ್ತಿಗಳಲ್ಲಿ ಬಲಾಢ್ಯರ ಪ್ರಾಬಲ್ಯಕಡಿಮೆ ಮಾಡಿ ಅವಕಾಶ ವಂಚಿತರಿಗೆ ನೈಜವಾಗಿ ಸಾಮಾಜಿಕ ನ್ಯಾಯ ಒದಗಿಸಲು ಪಂಚಾಯ್ತಿಗಳಿಂದ ಪ್ರತ್ಯೇಕವಾಗಿ ನ್ಯಾಯ ಪಂಚಾಯ್ತಿಗಳ ಸ್ಥಾಪನೆಗೆ ಶಿಫಾರಸ್ಸು ಮಾಡಿತು.
- ಎಲ್.ಎಂ. ಶಿಂಘ್ವಿ ಸಮಿತಿಯು ಅಂಬೇಡ್ಕರ್‌ರವರ ಸಾಮಾಜಿಕ ನ್ಯಾಯದ ಪರಿಕಲ್ಪನೆಗಳಿಗೆ ಸಂವಿಧಾನಿಕ ಬದ್ಧತೆ ನೀಡಿ, ಸಂವಿಧಾನದ ಮಾನ್ಯತೆಯ ಪಂಚಾಯಿತಿ ಸಂಸ್ಥೆಗಳ ರಚನೆಗೆ ಶಿಫಾರಸ್ಸು ಮಾಡಿದೆ.

**ಅಂಬೇಡ್ಕರ್‌ರವರ ಸಾಮಾಜಿಕ ನ್ಯಾಯದ ಆಶಯಕ್ಕೆ ಸಂವಿಧಾನ ಮನ್ನಣೆ**

- **1986ರಲ್ಲಿ ಎಲ್.ಎಂ. ಶಿಂಗ್ವಿ ಸಮಿತಿಯು:** ಪಂಚಾಯ್ತಿ ಸಂಸ್ಥೆಗಳಿಗೆ ಸಂವಿಧಾನಬದ್ಧ ಸ್ಥಾನಮಾನವನ್ನು ನೀಡಲು ಸಲಹೆ ನೀಡಿತು.
- ಸಂವಿಧಾನ ಬದ್ಧವಾಗಿ ಅಂಬೇಡ್ಕರ್‌ರವರ ವಿಚಾರಧಾರೆಗಳನ್ನು ಅನುಷ್ಠಾನಗೊಳಿಸುವ ಹಿನ್ನೆಲೆಯಾಗಿ, ಪಂಚಾಯ್ತಿ ಸಂಸ್ಥೆಗಳಿಗೆ ಸಾಂವಿಧಾನಿಕ ಸ್ಥಾನ–ಮಾನವನ್ನು ಕೊಡುವುದರ ಮೂಲಕ ಅವಕಾಶವಂಚಿತರಿಗೆ ಸಂವಿಧಾನಬದ್ಧ ಸ್ಥಳೀಯ ಹಕ್ಕುಗಳನ್ನು ಕೊಡಲು ಕೇಂದ್ರ ಸರಕಾರವು ತೀರ್ಮಾನಿಸಿ, 73ನೇ ಸಂವಿಧಾನ ತಿದ್ದುಪಡಿಯನ್ನು 1992ರಲ್ಲಿ ಜಾರಿಗೆ ತಂದಿತು. ಅಂಬೇಡ್ಕರ್‌ರವರ ಸಾಮಾಜಿಕ ನ್ಯಾಯದ ಆಶಯಗಳನ್ನು 73ನೇ ಸಂವಿಧಾನ ತಿದ್ದುಪಡಿಯ ಮೂಲಕ ಈಡೇರಿಸಲು ಸಾಧ್ಯವಾಯಿತು. ಅವುಗಳು :–
- 243 ಡಿ ವಿಧಿ – ಜನಸಂಖ್ಯೆಗೆ ಅನುಗುಣವಾಗಿ ಎಸ್.ಸಿ./ಎಸ್.ಟಿ, ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವುದು.
- 243 ಜಿ ವಿಧಿ – ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದಂತೆ ಯೋಜನೆಗಳನ್ನು ರೂಪಿಸುವುದು.
- 11ನೇ ಅನುಸೂಚಿಯಲ್ಲಿ ನಮೂದಿಸಿದ 29 ವಿಷಯಗಳಲ್ಲಿ ದುರ್ಬಲ ವರ್ಗದವರ ಕಲ್ಯಾಣಕ್ಕಾಗಿ ಕ್ರಮ ಕೈಗೊಳ್ಳುವುದು ಒಂದು ವಿಷಯವಾಗಿ ಸೇರ್ಪಡೆ
- 243 ಜೆ – ಪಂಚಾಯ್ತಿಗಳಲ್ಲಿ ಲೆಕ್ಕಪತ್ರ ಪರಿಶೋಧನೆ ಅವಕಾಶ ಮಾಡಿಕೊಡಲಾಯಿತು.

ಇದರಿಂದಾಗಿ ಕೇಂದ್ರ ಸರಕಾರವು ಅಂಬೇಡ್ಕರ್‌ರವರ ಸಮಾನತೆ ಆಶಯಗಳಿಗೆ ಸಂವಿಧಾನಬದ್ಧ ಸ್ಥಾನಮಾನ ನೀಡಿ ಅವಕಾಶ ವಂಚಿತರಿಗೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅನುವುಮಾಡಿಕೊಡಲಾಯಿತು.

**ಕರ್ನಾಟಕ ಸರಕಾರ ತೆಗೆದುಕೊಂಡ ಕ್ರಮಗಳು :–**

ಭಾರತದಲ್ಲಿ ಅಂಬೇಡ್ಕರ್‌ರವರ ಸಾಮಾಜಿಕ ನ್ಯಾಯದ ವಿಚಾರಗಳಿಗೆ ಪೂರಕವಾಗಿ, ದೇಶದಲ್ಲಿ ಸಾಮಾಜಿಕ ನ್ಯಾಯ ದೊರಕಿಸಿಕೊಡುವಲ್ಲಿ ಮತ್ತು ಸಮಾಜವಾದ ಮತ್ತು ಸಮತಾ ಸಮಾಜವನ್ನು ನಿರ್ಮಿಸುವಲ್ಲಿ ಕ್ರಮಕೈಗೊಂಡ ಮೊಟ್ಟ ಮೊದಲ ರಾಜ್ಯ ಮೈಸೂರು ರಾಜ್ಯವಾಗಿದೆ.

ದೇಶದ ಸಾಮಾಜಿಕ ನ್ಯಾಯದ ತವರೂರಾದ ಮೈಸೂರು ರಾಜ್ಯದಲ್ಲಿ, ಡಾ.ಬಿ.ಆರ್. ಅಂಬೇಡ್ಕರ್‌ರವರ ಸಮತಾ ಸಮಾಜ ಆಶಯಗಳಿಗೆ ಸಾಂಸ್ಥಿಕ ರೂಪ ನೀಡುವ ಪ್ರಕ್ರಿಯೆಯಾಗಿ ಮೈಸೂರಿನ ರಾಜರು 1902ರಲ್ಲಿ ಮೈಸೂರು ಸ್ಥಳೀಯ ಸರ್ಕಾರಗಳ ಕಾಯ್ದೆಯನ್ನು ಜಾರಿಗೆ ತಂದರು.

- 1952ರ ಮೈಸೂರು ಗ್ರಾಮ ಪಂಚಾಯ್ತಿ ಮತ್ತು ಜಿಲ್ಲಾ ಬೋರ್ಡ್ ಆಕ್ಟ್ – ಗ್ರಾಮ ಪಂಚಾಯ್ತಿ ಸದಸ್ಯರಲ್ಲಿ ಎಸ್.ಸಿ/ಎಸ್.ಟಿಗಳಿಗೆ ಮೀಸಲಾತಿಗೆ ಅನುವು ಮಾಡಿಕೊಡಲು ಮತ್ತು ಇದೇ ಆಕ್ಟ್ ಅಡಿಯಲ್ಲಿ ಗ್ರಾಮ ಪಂಚಾಯ್ತಿ ಚಲಾವಣೆಯಲ್ಲಿ ಎಲ್ಲರಿಗೂ ಮತದಾನದ ಹಕ್ಕನ್ನು ನೀಡಲಾಯಿತು.
- 73ನೇ ತಿದ್ದುಪಡಿ ಮೂಲಕ ಕರ್ನಾಟಕ ರಾಜ್ಯದ ಎಲ್ಲ 3 ಹಂತದ ಪಂಚಾಯಿತಿ ವ್ಯವಸ್ಥೆಯಲ್ಲಿ ಸಾಮಾಜಿಕ ನ್ಯಾಯ ಸಮಿತಿಗಳನ್ನು ರಚಿಸಲು ಕ್ರಮ ಕೈಗೊಳ್ಳಲಾಯಿತು.
- 50% ಮೀಸಲಾತಿಯನ್ನು ಮಹಿಳೆಯರಿಗೆ 3 ಹಂತದ ಪಂಚಾಯ್ತಿಗಳಲ್ಲಿ ನೀಡಲಾಗಿದೆ.
- ಇತ್ತೀಚಿಗೆ ರಮೇಶ ಕುಮಾರ ಸಮಿತಿ ಮತ್ತು ನಂಜಯ್ಯಮಠರವರ ಸಮಿತಿಗಳ ಆಧಾರದ ಮೇಲೆ ಗ್ರಾಮ ಪಂಚಾಯ್ತಿ ಕಾರ್ಯನಿರ್ವಹಣೆಯಲ್ಲಿ ಸಾಮಾಜಿಕ ನ್ಯಾಯ ಕಾಪಾಡುವಂತೆ ಸಲಹೆ ನೀಡಲಾಯಿತು.
- ಕರ್ನಾಟಕ ಸರ್ಕಾರವು ಮಕ್ಕಳ ಗ್ರಾಮ ಸಭೆ ಆಯೋಜನೆಗೆ ಕ್ರಮ ಕೈಗೊಂಡಿದೆ.

ಸಾಮಾಜಿಕ ಲೆಕ್ಕ ಪರಿಶೋಧನ ಎಂದರೆ :– ಸ್ಥಳೀಯ ಜನರ ಸಹಭಾಗಿತ್ವದೊಂದಿಗೆ ಪಂಚಾಯಿತಿ ಆಡಳಿತದಲ್ಲಿ ಪಾರದರ್ಶಕತೆಯನ್ನು ಕಾಪಾಡಲು ಸರ್ಕಾರಗಳು ಜಾರಿಗೆ ತಂದ ಒಂದು ಸುಧಾರಣಾ ಆಡಳಿತ ಯಂತ್ರವಾಗಿದೆ.

ಪಂಚಾಯತ್‌ರಾಜ್ ಇಲಾಖೆ, ಭಾರತ ಸರ್ಕಾರ (GOI) ಪ್ರಕಾರ –"Social Audit is a public assembly where all the details of the project are Scrutinized."

National Institute for Rural Development (NIRD) ಪ್ರಕಾರ "It is a way of Measuring, understanding, reporting and ultimately improving organization's social and ethical performance."

**ಸಾಮಾಜಿಕ ಪರಿಶೋಧನೆಯ ಹಿನ್ನೆಲೆ**

ಔದ್ಯೋಗಿಕ ಸಾಮಾಜಿಕ ಹೊಣೆಗಾರಿಕೆಯ (Corporate Social Responsibility) ಆಧಾರದ ಮೇಲೆ ಪ್ರಥಮವಾಗಿ 20ನೇ ಶತಮಾನದಲ್ಲಿ ಯುರೋಪ್ ಮತ್ತು ಅಮೇರಿಕಾದಲ್ಲಿನ ಕೈಗಾರಿಕೋದ್ಯಮಗಳು ತಮ್ಮ ಕೈಗಾರಿಕೆಗಳ ಕಾರ್ಯಗಳ ಮೌಲ್ಯಮಾಪನ ಮಾಡಲು ಸಾಮಾಜಿಕ ಪರಿಶೋಧನೆಯನ್ನು ಪರಿಚಯಿಸಲಾಯಿತು. ಂಣಜಿಣ (ಪರಿಶೋಧನೆ) ಎಂಬ ಪದವು ಲ್ಯಾಟಿನ್ ಭಾಷೆಯಿಂದ ಬಂದಿದ್ದು ಇದರ ಅರ್ಥ 'ಣಂ ಃಜಚಿಡ'

ಇಂಗ್ಲೀಷ್ ಅರ್ಥವನ್ನು ಕೊಡುತ್ತದೆ.

ಭಾರತದಲ್ಲಿ 1979ನೇ ವರ್ಷದಲ್ಲಿ ಟಾಟಾ ಕಂಪನಿಯವರು ಜೇಮ್‌ಷಡ್‌ಪುರದಲ್ಲಿ ಈ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಔದ್ಯಮಿಕ ಸಾಮಾಜಿಕ ಹೊಣೆಗಾರಿಕೆ ಹಿನ್ನೆಲೆಯಲ್ಲಿ ತಮ್ಮ ಕಂಪನಿಯ ಕಾರ್ಯಚಟುವಟಿಕೆಗಳ ಮೌಲ್ಯಮಾಪನ ಮಾಡಲು ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ಪರಿಚಯಿಸಲಾಯಿತು.

ಔದ್ಯಮಿಕ ಸಾಮಾಜಿಕ ಹೊಣೆಗಾರಿಕೆಯ ಸಾಮಾಜಿಕ ಪರಿಶೋಧನೆಯು, ಔದ್ಯಮಿಕ ರಂಗದಲ್ಲಿ ಯಶಸ್ಸು ಸಾಧಿಸಿದ ಹಿನ್ನೆಲೆಯಲ್ಲಿ ಭಾರತ ಸರ್ಕಾರದವರು ಇದರ ಮಹತ್ವವನ್ನು ಅರಿತು ಸ್ಥಳೀಯ ಗ್ರಾಮೀಣ ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ಮೌಲ್ಯಮಾಪನ ಮಾಡಲು ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಅದರಲ್ಲೂ ಗ್ರಾಮಪಂಚಾಯ್ತಿಗಳಲ್ಲಿ ಈ ಸಾಮಾಜಿಕ ಪರಿಶೋಧನೆಯನ್ನು ಅಳವಡಿಸಲು ಕ್ರಮಕೈಗೊಳ್ಳಲಾಯಿತು.

ಈ ಪ್ರಯತ್ನ ಮುಂದುವರೆದು, ಸಂವಿಧಾನದ 73ನೇ ತಿದ್ದುಪಡಿಯ ಮೂಲಕ 243–ಎ ವಿಧಿಯ ಪ್ರಕಾರ ಸ್ಥಳೀಯ ಸಂಸ್ಥೆಗಳಲ್ಲಿನ ಲೆಕ್ಕಪರಿಶೋಧನೆ ಕೈಗೊಳ್ಳಲು ಸಂವಿಧಾನಬದ್ಧಗೊಳಿಸಲಾಯಿತು. ಈ ಪರಿಶೋಧನೆಯು ಕೇವಲ ಲೆಕ್ಕಪರಿಶೋಧನೆಗೆ ಸೀಮಿತವಾಗಿತ್ತು, ಇದನ್ನು ವಿಸ್ತರಿಸಿ ಸಾಮಾಜಿಕ ನ್ಯಾಯದ ಹಿನ್ನೆಲೆ ಹೊಂದಿರುವಂತೆ ಪಂಚಾಯತ್‌ರಾಜ್ ಸಂಸ್ಥೆಗಳ ಕಾರ್ಯಕ್ರಮಗಳ ಮೌಲ್ಯಮಾಪನ ಮಾಡಲು ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲು ನೀತಿಯನ್ನು ರೂಪಿಸಲಾಯಿತು.

ಈ ನೀತಿಯ ಪ್ರಯತ್ನವಾಗಿ 9ನೇ ಪಂಚವಾರ್ಷಿಕ ಯೋಜನೆಯ (2002–07) ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಪರಿಣಾಮಕಾರಿ ಆಡಳಿತ ನಿರ್ವಹಣೆಗೆ ಸಾಮಾಜಿಕ ಪರಿಶೋಧನೆಯ ಮಹತ್ವವನ್ನು ಮನಗಾಣಲಾಯಿತು. ಈ ಮನಗಾಣಿಕೆಯನ್ನು ಇನ್ನು ಮುಂದುವರೆಸುತ್ತಾ, ಭಾರತ ಸರ್ಕಾರದವರು 2005 ರಲ್ಲಿ NREGS ಕಾರ್ಯಕ್ರಮವನ್ನು ಜಾರಿಗೆ ತರಲು ಈ ಯೋಜನೆಯ 17ನೇ ಅಂಶದಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನೆಗೆ ಅವಕಾಶ ಮಾಡಿಕೊಡಲಾಯಿತು.

ಇದನ್ನು ಇನ್ನು ಪರಿಣಾಮಕಾರಿಯಾಗಿ ರೂಪಿಸಲು ಕೇಂದ್ರ ಸರಕಾರವು Audit of Scheme Rules – 2011 ಎಂಬುದನ್ನು ರೂಪಿಸಲಾಗಿ, ಸಾಮಾಜಿಕ ಪರಿಶೋಧನೆಯನ್ನು ಗ್ರಾಮಪಂಚಾಯ್ತಿಗಳಲ್ಲಿ ಅನುಷ್ಠಾನಗೊಳಿಸುವಂತೆ ಎಲ್ಲ ರಾಜ್ಯಗಳಿಗೆ ನಿರ್ದೇಶನ ನೀಡಲಾಯಿತು. ಈ ನಿರ್ದೇಶನದಂತೆ ಕರ್ನಾಟಕ ಸರ್ಕಾರದವರು 10–01–2012ರ ದಿನಾಂಕದಂದು ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಕೃತವಾಗಿ ಪ್ರಕಟಿಸುವುದರ ಮೂಲಕ ಗ್ರಾಮ ಪಂಚಾಯ್ತಿಗಳ NREGS ಕಾರ್ಯಕ್ರಮಗಳ ಮೌಲ್ಯಮಾಪನ ಮಾಡಲು ಕ್ರಮ ಕೈಗೊಳ್ಳಲಾಗಿ, ಈ ಪರಿಶೋಧನೆಯನ್ನು ಮೇಲುಸ್ತುವಾರಿ ನೋಡಿಕೊಳ್ಳಲು ರಾಜ್ಯಮಟ್ಟದಲ್ಲಿ "Social Audit Unit" ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಇದರ ಕೇಂದ್ರ ಕಛೇರಿ ಬೆಂಗಳೂರಿನಲ್ಲಿದೆ.

ಕರ್ನಾಟಕದಲ್ಲಿ Social Audit Unit (SAU) ನ ಆಡಳಿತ ವರ್ಗದವರು ಈ ಕೆಳಗಿನಂತಿದೆ.

1. ನಿರ್ದೇಶಕರು – ಸಂಸ್ಥೆಯ ಮುಖ್ಯಸ್ಥರು
2. ಸಹಾಯಕ ನಿರ್ದೇಶಕರು – ಮುಖ್ಯಸ್ಥರಿಗೆ ಸಹಾಯಕರಾಗಿ
3. State Resource Person (SRP) - 4 Members
4. District Resource Person(DRP) - 1 for each District
5. Taluk Resource Person(TRP) - 1Resource Person for 12 Gramapanchayats
6. Gram Panchayat Resource persons, - 2 to 5 Resource persons for each Gramapanchayats

**ಸಾಮಾಜಿಕ ನ್ಯಾಯ ಸಲಕರಣೆಯಾಗಿ ಸಾಮಾಜಿಕ ಪರಿಶೋಧನೆ :–**

ಸಾಮಾಜಿಕ ಲೆಕ್ಕಪರಿಶೋಧನಾ ಸಮಿತಿಯು, ಸ್ಥಳೀಯ ಗ್ರಾಮ ಪಂಚಾಯ್ತಿ ಸಂಸ್ಥೆಗಳಿಂದ ಅನುಷ್ಠಾನಗೊಂಡ ವಿವಿಧ ಅಭಿವೃದ್ಧಿ ಕಾರ್ಯಗಳ ಕ್ರಮಬದ್ಧತೆಯನ್ನು ಪರಿಶೀಲಿಸುವ ಒಂದು ಸಮಿತಿಯಾಗಿದೆ. ಇದು ಸ್ಥಳೀಯ ಆಡಳಿತದಲ್ಲಿ ಪಾರದರ್ಶಕತೆ, ಪರಿಣಾಮಕತೆಯನ್ನು ಕಾಪಾಡಲು ಅಳವಡಿಸಿಕೊಂಡ ಸಾಮಾಜಿಕ ನ್ಯಾಯ ಪರಿಕಲ್ಪನೆ ಹಿನ್ನೆಲೆಯ ಸಾಮಾಜಿಕ ಪರಿಶೋಧನೆಯಾಗಿದೆ.

ಈ ಸಾಮಾಜಿಕ ಲೆಕ್ಕ ಪರಿಶೋಧನೆಯ ಸಮಿತಿಯಲ್ಲಿ ಸಾಮಾಜಿಕ ನ್ಯಾಯವನ್ನು ಕಾಪಾಡಿಕೊಳ್ಳಲಾಗಿದೆ. ಸಮಿತಿಯ ಒಟ್ಟು ಸದಸ್ಯರಲ್ಲಿ 1/3 ರಷ್ಟು ಮಹಿಳೆಯರು ಮತ್ತು ಋಅ/ಋಟ ಗಳು ಸದಸ್ಯರಾಗಿರಬೇಕು.ಈ ಅವಕಾಶ ವಂಚಿತರಿಗೆ ಈ ಸಮಿತಿಯಲ್ಲಿ ಅವಕಾಶಮಾಡಿಕೊಟ್ಟುಸಾಮಾಜಿಕ ನ್ಯಾಯವನ್ನು ಕಾಪಾಡಿಕೊಳ್ಳಲಾಗಿದೆ.

ಈ ಸಮಿತಿಯಲ್ಲಿ ಅವಕಾಶ ವಂಚಿತರಿಗೆ ಅವಕಾಶ ಕಲ್ಪಿಸಲು ಕಾರಣ ಪಂಚಾಯತ್‌ರಾಜ್ ಸಂಸ್ಥೆಗಳ ಅನುಷ್ಠಾನಗೊಂಡ ಕಾರ್ಯಗಳು ನಿರ್ಗತಿಕರು ವಾಸವಾಗಿರುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದಕ್ಕಾಗಿ ಸ್ಥಳೀಯ ಗ್ರಾಮೀಣ ಸರ್ಕಾರಗಳಿಂದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.ಇಂತಹ ಕಾರ್ಯಗಳ ಪರಿಣಾಮಕಾರಿ ಅನುಷ್ಠಾನದ ಖಚಿತಪಡಿಸಲು ಅದೇ ಅವಕಾಶ ವಂಚಿತ ಯೋಜನಾ ಫಲಾನುಭವಿಗಳ ಸದಸ್ಯರಿಂದ ಕೂಡಿದ ಸಾಮಾಜಿಕ ಪರಿಶೋಧನಾ ಸಮಿತಿಯು, ಲೆಕ್ಕಪರಿಶೋಧನೆಯನ್ನು ಕೈಗೊಳ್ಳುತ್ತಿದೆ. ಇದು ಯೋಜನೆಗಳ ಪರಿಣಾಮಕಾರಿ ಅನುಷ್ಠಾನದಲ್ಲಿನ ಸ್ಥಳೀಯ ಜನರು ಅದರಲ್ಲೂ ಅವಕಾಶವಂಚಿತರ ಪಾಲ್ಗೊಳ್ಳುವಿಕೆಗೆ ಉತ್ತೇಜನ ನೀಡಿದಂತಾಗಿ ವಿಕೇಂದ್ರೀಕರಣ ಆಡಳಿತದ ಪರಿಕಲ್ಪನೆ ಮತ್ತು ಅಂಬೇಡ್ಕರ್‌ರವರ ಸಾಮಾಜಿಕ ನ್ಯಾಯದೊಂದಿಗೆ ವಿಕೇಂದ್ರೀಕರಣದ ಪಾರದರ್ಶಕತೆ ಆಡಳಿತದ ಸಾಧಿಸಲು ಸಾಧ್ಯವಾಗುವುದು.

ಅಂಬೇಡ್ಕರ್‌ರವರು ಹೇಳಿದಂತೆ "ಯಾವುದೇ ಸರ್ಕಾರಗಳಿರಲಿ ಅಥವಾ ಯಾವುದೇ ಪರಿಶೋಧನಾ ಸಮಿತಿಗಳಾಗಿರಲಿ ಅವುಗಳಲ್ಲಿ ಸಾಮಾಜಿಕ ನ್ಯಾಯವನ್ನು ಕಾಪಾಡುವುದು ಅತ್ಯಂತ ಅವಶ್ಯಕ" ಎಂಬ ಪ್ರತಿಪಾದಿಸಿದ್ದರು.

**ಉಪಸಂಹಾರ**

ಪಂಚಾಯತ್‌ರಾಜ್ ಸಂಸ್ಥೆಗಳನ್ನು ಸಂವಿಧಾನದಲ್ಲಿ ಅಳವಡಿಸುವುದರ ಮೂಲಕ ಅಂಬೇಡ್ಕರ್‌ರವರ ಸಮಸಮಾಜ ಮತ್ತು ಸಾಮಾಜಿಕ ನ್ಯಾಯ ಪರಿಕಲ್ಪನೆಗಳಿಗೆ 73ನೇ ತಿದ್ದುಪಡಿಯ ಮೂಲಕ ಸಂವಿಧಾನಿಕ ಮಾನ್ಯತೆ ನೀಡಲಾಗಿದೆ.ಆದರೆ ನೀಡಿದ ಸಂವಿಧಾನಿಕ ಮಾನ್ಯತೆಗಳಿಂದ ಸಮ ಸಮಾಜ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆಯೇ ಎಂಬ ಪ್ರಶ್ನೆ? ಈ ಪ್ರಶ್ನೆಗೆ ಉತ್ತರವಾಗಿ ಈ ತರಹದ ಸಂವಿಧಾನಿಕ ಕ್ರಮಗಳ ಜೊತೆಗೆ ಶ್ರೇಣೀಕೃತ ಸಮಾಜದ ಜನರ ಮನಸ್ಥಿತಿ ಬದಲಾಗಬೇಕಾಗಿದೆ. ಸರ್ಕಾರಗಳು ಮತ್ತು ಜನರು ಜಂಟಿಯಾಗಿ ಮಾನವೀಯತೆ ಹಿನ್ನೆಲೆಯಲ್ಲಿ ವರ್ತಿಸಿದಾಗ ಮಾತ್ರ ಸಮ ಸಮಾಜ ನಿರ್ಮಾಣವಾಗಲು ಸಾಧ್ಯವಾಗಿ, ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಅಂಬೇಡ್ಕರ್‌ರವರ ಆಶಯಗಳು ಈಡೇರಿದಂತಾಗುತ್ತದೆ.

**ಆಧಾರ ಗ್ರಂಥಗಳು**


1. ಗಾಂಧಿ – ಅಂಬೇಡ್ಕರ್ ಮತ್ತು ಸಮಾಜವಾದ – ಬಾಪೂ ಹೆದ್ದೂರ್ ಶೆಟ್ಟಿ, ಅನ್ವೇಷಣೆ ಪ್ರಕಾಶನ ಬೆಂಗಳೂರು, 2013.
2. ಭಾರತ ಸಂವಿಧಾನ ಮತ್ತು ರಾಜಕೀಯ – ಪಿ.ಎಸ್. ಗಂಗಾಧರ – ಚೈತ್ರ ಪ್ರಕಾಶನ, ಗಾಂಧಿನಗರ, ಬೆಂಗಳೂರು–2012.
3. ಭಾರತದಲ್ಲಿ ಪಂಚಾಯತ್‌ರಾಜ್ – ಎಂ. ಅಸ್ಲಮ್ (ಅನುವಾದ ಈಶ್ವರ ಚಂದ್ರ) ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ 2007.
4. ಪಂಚಾಯತ್ ರಾಜ್ ವ್ಯವಸ್ಥೆ– ಹೆಚ್.ಸಿ. ಲೋಹಿತಾಶ್ವ, ವಿದ್ಯಾನಿಧಿ ಪ್ರಕಾಶನ, ಗದಗ, 2003–04.
5. ಅಂಬೇಡ್ಕರ್ ಭಾರತ – ಪ್ರೊ. ಹೆಚ್.ಟಿ. ಪೋತೆ, ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು, 2017.
6. Indian Polity, M Lakshmi Kanth, M C Graw Hill Educaiton private Limited, New, Delhi, 2014.
7. Social Audit by Gram Sabha, Article Published by panchayt Raj, News letter of Aug-Sep-2013.